ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ನಾನು ನಿಲುವಳಿ ಸೂಚನೆ ಕಳುಹಿಸಿದ್ದೆ. ಅದರ ಬಗ್ಗೆ ತಾವೂ ಏನು ಹೇಳಲಿಲ್ಲ.

ಅಧ್ಯಕ್ಷರು : ತಾವು ಕಳುಹಿಸಿದ ನಿಲುವಳಿ ಸೂಚನೆಯನ್ನು ನಾನು ನಿಯಮ 69ಕ್ಕೆ ಕನ್‌ವರ್ಟ್ ಮಾಡಿದ್ದೇನೆ. ಅದರ ಬಗ್ಗೆ ನಾಳೆ ನಾವು ಕುಳಿತುಕೊಂಡು ಮಾತನಾಡಿ ನಾಳೆ ತೆಗೆದುಕೊಳ್ಳೋಣ.

(ಇ) ವಿಷಯ : ತರೀಕೆರೆ ತಾಲ್ಲೂಕಿನ ಕುಂದು ಮಳೆ ಗ್ರಾಮದಲ್ಲಿ ವಾಂತಿ ಭೇದಿಯಿಂದ ಜನ ನರಳುತ್ತಿರುವುದು.

ಶ್ರೀ ಬಿ.ಆರ್. ನೀಲಕಂಟಪ್ಪ : ಮಾನ್ಯ ಅಧ್ಯಕ್ಷರೇ, ಶೂನ್ಯ ವೇಳೆ ಮಾನ್ಯ ಅಧ್ಯಕ್ಷರೇ, ನಾನು ಈ ಹಿಂದೆ ಒಂದು ಪ್ರಶ್ನೆ ಕೇಳಿದ್ದೆ. ನಮ್ಮ ತರೀಕೆರೆ ತಾಲ್ಲೂಕು ಕುಂದುಮಳೆ ಇಡೀ ಗ್ರಾಮದಲ್ಲಿ ವಾಂತಿ ಭೇದಿಯಿಂದ ಜನ ನರಳುತ್ತಿದ್ದಾರೆ. ಒಂದು ವಾರದಿಂದ ಪರಿಸ್ಥಿತಿ ಬಿಗಡಾಯಿಸಿದೆ. ಜನರನ್ನು ಆಸ್ಪತ್ರೆಗೆ ಸೇರಿಸುತ್ತಿದ್ದಾರೆ.

ಅಧ್ಯಕ್ಷರು : ತಮ್ಮ ವಿಷಯವೂ ಅಷ್ಟೇ. ಬೇಡಿಕೆಗಳು ಮೊದಲು ಮುಗಿಯಲಿ ಪ್ರಶ್ನೋತ್ತರ ವೇಳೆ ಬರುತ್ತದೆ. ಅದು ಮುಗಿದ ನಂತರ ತಾವು ಪ್ರಸ್ತಾಪ ಮಾಡಬಹುದು. ಈಗ ಬೇಡ. ಈಗ ಬೇಡಿಕೆ ಸಂಖ್ಯೆ 26.

4) ವಿತ್ತೀಯ ಕಾರ್ಯಕಲಾಪಗಳು

ಅ) 2002-2003ನೇ ಸಾಲಿನ ಅನುದಾನ ಬೇಡಿಕೆಗಳ ಮಂಡನೆ ಮತ್ತು ಚರ್ಚೆ ಹಾಗೂ ಸರ್ಕಾರದಿಂದ ಉತ್ತರ ಹಾಗೂ ಮತಕ್ಕೆ ಹಾಕುವುದು.

ಬೇಡಿಕೆ ಸಂಖ್ಯೆ : 29

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು): ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜ್ಯಸ್ವ ಖಾತೆಯಲ್ಲಿ 32,365,37 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 530.00 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : 30

ಶ್ರೀ ಕೆ.ಹೆಚ್. ರಂಗನಾಥ್ (ಮಾನ್ಯ ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅರಣ್ಯ ಜೀವಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವಖಾತೆಯಲ್ಲಿ 30.100.25 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,035.00 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಬೇಡಿಕೆ ಸಂಖ್ಯೆ 31, ಸಾರಿಗೆ ಸಚಿವರು, ಸಚಿವರು ಎಲ್ಲಿ?

ಮಂತ್ರಿಗಳು ಬೇಡಿಕೆ ಮಂಡನೆ ಮಾಡವವರೆಗೆ ಇಲ್ಲದೇ ಇದ್ದರೆ ಎನ್ರಿ ಇದು? ಆಯಿತು ಕೊನೆಯಲ್ಲಿ ಕರೆಯುತ್ತೇನೆ.

ಬೇಡಿಕೆ ಸಂಖ್ಯೆ : 25

ಶ್ರೀ ಬಸವರಾಜ್ ಹೆಚ್ ಪಾಟೀಲ್ (ಇಂಧನ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಿದ್ಯುಚ್ಛಕ್ತಿ ಯೋಜನೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,46,041.16 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 700.00 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : 37.

ಶ್ರೀ ಕುಮಾರ್ ಬಂಗಾರಪ್ಪ : (ಮಾನ್ಯ ಪೌರಾಡಳಿತ ರಾಜ್ಯ ಸಚಿವರು) ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರಾಭಿವೃದ್ಧಿ ಪ್ರಾಧೀಕಾರಗಳು (ಬೆಂಗಳೂರು ಅಭಿವೃದ್ಧಿ ಯೋಜನೆಗಳು ಹೊರತುಪಡಿಸಿ) ನಗರಾಭಿವೃದ್ಧಿ ಪ್ರಾಧೀಕಾರಗಳ ಮತ್ತು ನಗರ ಯೋಜನೆ ಇಲಾಖೆ ಮುನಿಸಿಪಲ್ ಕಾರ್ಪೊರೇಷನ್‌ಗಳು (ಬೆಂಗಳೂರು ಮಹಾನಗರಪಾಲಿಕೆ ಹೊರತುಪಡಿಸಿ) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 74,678,49 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3,415.00 ಲಕ್ಷ (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : 36

ಶ್ರೀ ಸಿ ಆರ್ ಸಗೀರ್ ಅಹಮದ್ : (ಮಾನ್ಯ ವಸತಿ ಸಚಿವರು) ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಸತಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 19,504.93 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10.00 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಬೇಡಿಕೆ ಸಂಖ್ಯೆ 45 ಸಹಕಾರ (ಕೃಷಿ ಮಾರುಕಟ್ಟೆ ಹೊರತುಪಡಿಸಿ) ಶ್ರೀ ಸಾಸನೂರು ಹಾಗೂ ರೈ ರವರನ್ನು ಕರೆಸಿ.

ಬೇಡಿಕೆ ಸಂಖ್ಯೆ : 60 ನಗರಸಭೆಗಳು, ಪಟ್ಟಣ ಪುರಸಭೆಗಳು ಮತ್ತು ಟೌನ್ ಪಂಚಾಯತಿಗಳು.

ಶ್ರೀ ಕುಮಾರ್ ಬಂಗಾರಪ್ಪ : ಸನ್ಮಾನ್ಯ ಅಧ್ಯಕ್ಷರೇ...

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಂಡನೆ ಮಾಡಿದ್ದು ಅದನ್ನೆ ಅವರು. ನಗರಾಭಿವೃದ್ಧಿ ಸಚಿವರು ಬಂದಿಲ್ಲ. ಪುರಸಭೆಗೆ ಸಂಬಂಧಪಟ್ಟಂತೆ ಅವರು ಮಂಡನೆ ಮಾಡಿದ್ದಾರೆ.

ಅಧ್ಯಕ್ಷರು : ಅವರು ಸೀನಿಯರ್ ಮಿನಿಸ್ಟರ್. ಇವರು ಜೂನಿಯರ್ ಮಿನಿಸ್ಟರ್.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ ಇದು ಅದಲು ಬದಲಾಗಿದೆ. ಇವರು ಮುನಿಸಿಪಲ್ ಮಂತ್ರಿಗಳು. ಹಿಂದೆ ಮಂಡನೆ ಮಾಡಿದ್ದು, ನಗರಾಭಿವೃದ್ಧಿ ಬೇಡಿಕೆ ಈಗ ಮಾಡಬೇಕಾಗಿರುವುದು ಬೇಡಿಕೆ ಸಂಖ್ಯೆ 60 ರೆಕಾರ್ಡ್ ಸ್ಟ್ರೈಟ್ ಇರಬೇಕು. ಯಾರ ಯಾರದ್ದೋ ಮಂತ್ರಿಗಳದ್ದು ಯಾರ್ಯಾರೋ ಮಂಡನೆ ಮಾಡುವುದು...

ಅಧ್ಯಕ್ಷರು : ನೋಡೋಣ. ಇದೆಲ್ಲಾ ಮಂಡನೆ ಮಾಡಲು ಹತ್ತು ನಿಮಿಷ ಆಗುತ್ತದೆ. ಬರದೇ ಇದ್ದರೆ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಇದ್ದಾರೆ. ಅವರು ಮಂಡನೆ ಮಾಡುತ್ತಾರೆ. ಅವರು ಯಾರದ್ದಾದರೂ ಮಂಡನೆ ಮಾಡಬಹುದು.

ಶ್ರೀ ಬಿ. ಸೋಮಶೇಖರ್ : ತಪ್ಪಾಗಿದೆ.

ಅಧ್ಯಕ್ಷರು : ಅದನ್ನು ಸರಿಪಡಿಸೋಣ.

ಬೇಡಿಕೆ ಸಂಖ್ಯೆ : 60

ಶ್ರೀ ಕುಮಾರ್ ಬಂಗಾರಪ್ಪ : (ಮಾನ್ಯ ಪೌರಾಡಳಿತ ರಾಜ್ಯ ಸಚಿವರು) ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರ ಪುರಸಭೆಗಳು, ಪಟ್ಟಣ ಪುರಸಭೆಗಳು ಮತ್ತು ಟೌನ್ ಪಂಚಾಯತ್‌ಗಳು (ನಗರಾಭಿವೃದ್ಧಿ ಇಲಾಖೆಯಿಂದ) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1152.76 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 400.00 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : 40 ಮತ್ತು 41

ಶ್ರೀ ಡಿ ಬಿ ಚಂದ್ರೇಗೌಡ : (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯ ಶಾಸಕಾಂಗ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 3,851.53 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಹಾಗೆಯೇ ಬೇಡಿಕೆ ಸಂಖ್ಯೆ 41ಕ್ಕೆ ಸಂಬಂಧಪಟ್ಟಂತೆ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನ್ಯಾಯ ಪರಿಪಾಲನೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 13,980.77 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : 50

ಡಾ|| ಎ.ಬಿ. ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-02 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ

"ವೈದ್ಯಕೀಯ ಶಿಕ್ಷಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 25,632.02 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 250.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : 38

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-02 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಭಾರಿ ಮತ್ತು ಮಧ್ಯಮ ನೀರಾವರಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 10,901,58 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,93,460.26 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : 39

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಣ್ಣ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಣ್ಣ ನೀರಾವರಿ (ಅಂತರ್ಜಲ ಹೊರತುಪಡಿಸಿ)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 8,428.25 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 11,141.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನುವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : 28

ಶ್ರೀ ರಾಜಾ ಅಮರೇಶ ನಾಯಕ (ಬಂಧೀಖಾನೆ, ಹೋಮ್‌ಗಾರ್ಡ್ಸ್, ನಾಗರಿಕ ರಕ್ಷಣೆ ಮತ್ತು ಕಾನೂನು ಮಾಪನ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಬಂದೀಖಾನೆ, ಗೃಹರಕ್ಷಣಾದಳ, ನಾಗರೀಕ ರಕ್ಷಣೆ ಮತ್ತು ಸೈನಿಕರ ಕಲ್ಯಾಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 7,312.97 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 40.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : 57 - 58

ಶ್ರೀ ಟಿ. ಜಾನ್ (ಮೂಲಭೂತ ಸೌಕರ್ಯ ಅಭಿವೃದ್ಧಿ ಮತ್ತು ನಾಗರೀಕ ವಿಮಾನ ಯಾನ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮೂಲಭೂತ ಸೌಕರ್ಯಗಳ ಅಭಿವೃದ್ಧಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 100.00 ಲಕ್ಷ

ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಹಾಗೂ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನಾಗರೀಕ ವಿಮಾನಯಾನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 60.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ..... ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : 34-52

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪ್ರವಾಸೋದ್ಯಮ ಮತ್ತು ಹಜ್" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,224.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಹಾಗೂ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಾಹಿತಿ ತಂತ್ರಜ್ಞಾನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 802.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ 13

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕನ್ನಡ ಮತ್ತು ಸಂಸ್ಕೃತಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,998.27 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 150.00 ಲಕ್ಷರೂಗಳಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : 05

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು (ಮಾ.ತಂ.ಬಿಟ್ಟು)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 26,133.33 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 30,482.00 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : 06

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗಣಿ ಮತ್ತು ಭೂ ವಿಜ್ಞಾನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,438.48 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : 07

ಶ್ರೀ ರೋಷನ್ ಬೇಗ್ (ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಚಿಕ್ಕಪುಟ್ಟ ಉದ್ಯಮಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 17,371.11 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 600.00 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : 42

ಶ್ರೀ ಹೆಚ್.ಸಿ ಶ್ರೀಕಂಠಯ್ಯ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಂದಾಯ (ವಕ್ಫ್, ಹಜ್ ಮತ್ತು ಮುಜರಾಯಿ ಹೊರತುಪಡಿಸಿ)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 56,932.06 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 0.65 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : 27

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವೆಯವರು) : ಮಾನ್ಯ ಅಧ್ಯಕ್ಷರೇ, 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮುಜರಾಯಿ (ವಕ್ಫ್ ಮತ್ತು ಹಜ್ ಹೊರತುಪಡಿಸಿ)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,074.85 ಲಕ್ಷ ರೂ.ಗಳಿಗಿಂತ (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : 44

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಲೋಕೋಪಯೋಗಿ ಕಾಮಗಾರಿ (ಬಂದರು ಮತ್ತು ಒಳನಾಡು ಸಾರಿಗೆ ಹೊರತುಪಡಿಸಿ)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 67,962.16 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 87,483.90 ರೂ. ಗಳಿಗಿಂತ ಮೀರಿದ

ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : 48

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಮಾಜ ಕಲ್ಯಾಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 54,388.35 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 6,654.00 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 14 – ವರಮಾನ, ವೃತ್ತಿಗಳು, ಮಾರಾಟ ಮತ್ತು ಇತರೆ ಸೇವೆಗಳ ಮೇಲಿನ ತೆರಿಗೆಗಳು

ಮಾನ್ಯ ಶ್ರೀ ಎಸ್.ಎಂ. ಕೃಷ್ಣ (ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಹಣಕಾಸು ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವರಮಾನ, ವೃತ್ತಿಗಳು, ಮಾರಾಟ ಮತ್ತು ಇತರೆ ಸೇವೆಗಳ ಮೇಲಿನ ತೆರಿಗೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 13,324.93 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಹಾಗೂ

ಅಭಿಯಾಚನೆ ಕ್ರಮಾಂಕ – 15 – ವಿಶ್ರಾಂತಿ ವೇತನ ಮತ್ತು ಇತರೆ ನಿವೃತ್ತಿ ಸೌಲಭ್ಯಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಿಶ್ರಾಂತಿ ವೇತನ ಮತ್ತು ಇತರೆ ನಿವೃತ್ತಿ ಸೌಲಭ್ಯಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,93,818.07 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಹಾಗೂ

ಅಭಿಯಾಚನೆ ಕ್ರಮಾಂಕ 16 – ಸರ್ಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸರ್ಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,800.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,313.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಹಾಗೂ

ಅಭಿಯಾಚನೆ ಕ್ರಮಾಂಕ 17 – ಖಜಾನೆ ಮತ್ತು ಲೆಕ್ಕಗಳ ಆಡಳಿತ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಖಜಾನೆ ಮತ್ತು ಲೆಕ್ಕಗಳ ಆಡಳಿತ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 5,932.62 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಹಾಗೂ

ಅಭಿಯಾಚನೆ ಕ್ರಮಾಂಕ 18 – ಇತರೆ ವಿವಿಧ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಇತರೆ ವಿವಿಧ ಸೇವೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 37.24 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಹಾಗೂ

ಅಭಿಯಾಚನೆ ಕ್ರಮಾಂಕ 20 – ಪೊಲೀಸ್ ಜಾಗೃತದಳ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪೊಲೀಸ್ ಜಾಗೃತದಳ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,443.78 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಹಾಗೂ

ಅಭಿಯಾಚನೆ ಕ್ರಮಾಂಕ 21 – ಬೆಂಗಳೂರು ಅಭಿವೃದ್ಧಿ ಯೋಜನೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಬೆಂಗಳೂರು ಅಭಿವೃದ್ಧಿ ಯೋಜನೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ .....ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 9,810.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಹಾಗೂ

ಅಭಿಯಾಚನೆ ಕ್ರಮಾಂಕ 22 – ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,093.79 ಲಕ್ಷ ರೂ.ಗಳಿಗಿಂತ

ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಹಾಗೂ

ಅಭಿಯಾಚನೆ ಕ್ರಮಾಂಕ 23 – ಸಚಿವಾಲಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಚಿವಾಲಯ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 7,272.85 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಹಾಗೂ

ಅಭಿಯಾಚನೆ ಕ್ರಮಾಂಕ 24 – ಸಾಮಾನ್ಯ ಆಡಳಿತ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಾಮಾನ್ಯ ಆಡಳಿತ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 4,268.22 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಹಾಗೂ

ಅಭಿಯಾಚನೆ ಕ್ರಮಾಂಕ 62 – ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ಮತ್ತು ಬೆಂಗಳೂರು ಮಹಾನಗರ ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ಮತ್ತು ಬೆಂಗಳೂರು ಮಹಾನಗರ ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 14,263.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 18,200.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು(ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೇ, ಅಭಿಯಾಚನೆ ಕ್ರಮಾಂಕ 32 – ಒಳಾಡಳಿತ (ಪೊಲೀಸ್ ಜಾಗೃತದಳ ಹೊರತುಪಡಿಸಿ)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಒಳಾಡಳಿತ (ಪೊಲೀಸ್ ಜಾಗೃತದಳ ಹೊರತುಪಡಿಸಿ)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 85,686.26 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,190.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು(ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : 31

ಶ್ರೀ ಬಿ. ರಮಾನಾಥ ರೈ (ಮಾನ್ಯ ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೇ, 31-3-03 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಾರಿಗೆ ಸೇವೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 14,657.04 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

10.40 ಎಎಂ

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ ತಾವು ಅನುಮತಿ ಕೊಟ್ಟರೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನದೊಂದು ಮನವಿ. ಈ ಸದನದ ಸತ್ಸಂಪ್ರದಾಯವೇನಿದೆ ಅಂಕದರೆ ಕನಿಷ್ಟ ಈ ಬೇಡಿಕೆಗಳನ್ನು ಮಂಡಿಸುವಾಗಲಾದರೂ ಮಂತ್ರಿಗಳು ತಮ್ಮ ಜವಾಬ್ದಾರಿಯನ್ನು ತಿಳಿದುಕೊಂಡು ಸಭೆಯಲ್ಲಿ ಇರಬೇಕಾಗುತ್ತದೆ.

ಮಾನ್ಯ ಮುಖ್ಯಮಂತ್ರಿಗಳು ಹೇಳಿದರು : ಈ ಸದನದಲ್ಲಿ ಕಾಗದಪತ್ರವನ್ನು ಮಂಡನೇ ಮಾಡದೇ ಹೋದರೆ ಅವರಿಗೆ ಸಂಬಂಧಪಟ್ಟಂತಹ ಕಾಗದಪತ್ರಗಳನ್ನು ಮಂಡನೆ ಮಾಡಬೇಡಿ ಎಂಬ ವಿಚಾರವನ್ನು ಸಹಿತ ಹೇಳಿದ್ದರು. ತಾವು ಎಲ್ಲದಕ್ಕೂ ಅವಕಾಶ ಕೊಟ್ಟಿದ್ದೀರಿ, ನಾವು ಮೂಕಪ್ರೇಕ್ಷಕರಂತೆ ಕುಳಿತಿದ್ದೇವೆ. ಬಿಎಸಿಯಲ್ಲಿ ತೀರ್ಮಾನವಾದಂತೆ ಇವತ್ತೆರಡು ಗಂಟೆಯೊಳಗೆ ನಾವಿದನ್ನು ಪಾಸ್ ಮಾಡಲಿಲ್ಲವೆಂದರೆ ನಾಡಿದ್ದು ಬೇಜವಾಬ್ದಾರಿ ನೋಡಿ ನಮಗೆಲ್ಲಾ ಸಂಬಳಕ್ಕೆ ದುಡ್ಡಿಲ್ಲ ಎಂದು ಜನ ನಮ್ಮನ್ನು ದೂಷಣೆ ಮಾಡುತ್ತಾರೆ ಎನ್ನುವ ಸಂದರ್ಭ ಬಂದಿದೆ. ಈಗ ನಾನು ಸುಮ್ಮನೆ ಕುಳಿತುಕೊಂಡರೆ ಇದು ಸತ್ಸಂಪ್ರದಾಯವೆಂದು ಕತಗಳಲ್ಲಿ ಉಳಿದು ನಾಳೆ ಇನ್ನಾರೋ ಹೇಳುತ್ತಾರೆ. ಎಲ್ಲಾ ಕುಳಿತಿದ್ದಾಗಲೂ ಸಹಿತ ನಡೆದುಕೊಂಡೇ ಹೋಯಿತು ಎಂದು. ಕನಿಷ್ಟ ಪಕ್ಷ ಇದು ಸತ್ಸಂಪ್ರದಾಯವಲ್ಲ. ಅಷ್ಟರಮಟ್ಟಿನ ಜವಾಬ್ದಾರಿಯನ್ನು ಮಾನ್ಯ ಗೌರವಾನ್ವೀತ ಸಚಿವರು ಈ ಸದನಕ್ಕೆ ತೋರಿಸಬೇಕಾಗುತ್ತದೆ. ನಾನು ಈ ವರ್ತನೆಯನ್ನು ಅತ್ಯಂತ ತೀವ್ರತರವಾಗಿ ಪ್ರತಿಭಟಿಸುತ್ತೇನೆ.

ಅಧ್ಯಕ್ಷರು : ಚಂದ್ರೇಗೌಡರೇ ಬೇಡಿಕೆಗಳ ಸಂಖ್ಯೆ 33,51.50 ಇವುಗಳನ್ನು ಮಂಡಿಸಿ. ಮಾನ್ಯ ಸಚಿವರಾದ ಶ್ರೀ ತಿಮ್ಮಪ್ಪನವರು, ನಿಧಾನ ಮಾಡುವವರಲ್ಲ. ಟ್ರಾಫಿಕ್ ಜಾಮ್ ಆಗಿರಬೇಕು.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಆಯಾ ಇಲಾಖೆಗಳ ಸಚಿವರು ಬೇಡಿಕೆಗಳನ್ನು ಮಂಡನೆ ಮಾಡಬೇಕು.

ಅಧ್ಯಕ್ಷರು : ಸ್ವಾಮಿ, ಅವರು ಜೆಪಿ ನಗರದಿಂದ ಬರಬೇಕ್ರಿ. ನಮ್ಮ ಪಕ್ಕ ಇರೋರು ಅವರು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸಿಂಧ್ಯಾರವರು ಹೇಳಿದರು ಒಂದು ಸತ್ಸಂಪ್ರದಾಯವಿದೆಯೆಂದು. ಅದನ್ನು ನಾವು ಪಾಲಿಸುತ್ತಿಲ್ಲ. ಹಿಂದೊಮ್ಮೆ ಮುಖ್ಯಮಂತ್ರಿಗಳ ಸಚಿವರು ಬಂದರಷ್ಟೇ ಕಾಗದಪತ್ರಗಳನ್ನು ಮಂಡನೆ ಮಾಡಿರಿ, ಇಲ್ಲದೇ ಹೋದರೆ ಬೇಡ ಎಂದು ಹೇಳಿದ್ದರು. ಹಾಗಿರುವಾಗ ಇವತ್ತು ಲೋಕಾನುದಾನವಂತಹ ಮಹತ್ವದ ಸಂಬಂಧಪಟ್ಟ ಬೇಡಿಕೆಗಳನ್ನು ಮಂಡಿಸಬಾರದೆ? ಮಾನ್ಯ ರಂಗನಾಥ್‌ರವರು ಏನು ಹೇಳುವರೋ? ಅವರು

ಹಿರಿಯ ಸಚಿವರು, ಅನುಭವಿಕರು, ಇದ್ಯಾವ ಸಂಪ್ರದಾಯ ಎಂದು ಹೇಳಿದರೆ ಒಳ್ಳೆಯದಾಗುತ್ತದೆ. ನಾಳೆ ಇದೇ ಒಂದು ಸಂಪ್ರದಾಯವಾಗುತ್ತವೆ. ಇದೇ ಪದ್ಧತಿ ಮುಂದುವರೆದರೆ ಎಲ್ಲಾ ಮಂತ್ರಿಗಳೂ ಅಲ್ಲಿದ್ದಾರೆ ಇಲ್ಲಿದ್ದಾರೆ ಎಂದು ಹೇಳಿ ಅವರ ಪರವಾಗಿ ಇನ್ನಾರೋ ಮಂಡಿಸಿಬಿಡಿ ಎಂದು ಹೇಳಿ.

ಶ್ರೀ ಕೆ ಹೆಚ್ ರಂಗನಾಥ್ : ಸನ್ಮಾನ್ಯ ಅಧ್ಯಕ್ಷರೇ, ಅನಿವಾರ್ಯವಾಗಿ ಈ ಪರಿಸ್ಥಿತಿಗೆ ನಾವು ತಳ್ಳಲ್ಪಟ್ಟಿದ್ದೇವೆ. ನನ್ನ ಬೇಡಿಕೆ 16ನೇ ತಾರೀಖು ಬರಬೇಕಾಗಿತ್ತು. ಅದು ಬಿಎಸಿಯಲ್ಲಿ ಮತ್ತು ಈ ಮನೆಯಲ್ಲಿ ಒಪ್ಪಿ ತೀರ್ಮಾನವಾಗಿತ್ತು. ಇವತ್ತು ಅನಿವಾರ್ಯವಾಗಿ ಎಲ್ಲವನ್ನೂ ಮೂವ್ ಮಾಡುವಂತಹ ಪರಿಸ್ಥಿತಿ ಬಂದಿದೆ. ಅದಕ್ಕೆ ಮಂತ್ರಿಗಳ ಬಗ್ಗೆ ಮುಖ್ಯಮಂತ್ರಿಗಳ ಬಗ್ಗೆ ಲಘುವಾಗಿ ಮಾತನಾಡತಕ್ಕದ್ದು ಸರಿಯಲ್ಲ. ನಾವೆಲ್ಲರೂ ಭಾಗಿಗಳು. ಮನಿ ಬಿಲ್ ಪಾಸ್ ಮಾಡಿಕೊಡುವುದು ನಮ್ಮ ಕರ್ತವ್ಯ. ಬೇರೆ ಬೇರೆ ವಿಚಾರ ಬಂದಿದ್ದರಿಂದ ತಾವು ಇದನ್ನು ಅನಿವಾರ್ಯವಾಗಿ ಮುಂದಕ್ಕೆ ಹಾಕತಕ್ಕಂತಹ ಪರಿಸ್ಥಿತಿ ಬಂದಿದೆ.

ಅಧ್ಯಕ್ಷರು : ಚಂದ್ರೇಗೌಡರೇ ಇನ್ನು ಮುಂದೆಯಾದರೂ ಮಂತ್ರಿಗಳು ಸಮಯಕ್ಕೆ ಸರಿಯಾಗಿ ಬರುವುದಕ್ಕೆ ಏರ್ಪಾಡು ಮಾಡಿ.

ಶ್ರೀ ಜಗದೀಶ್ ಶೆಟ್ಟರ್ : ನಿನ್ನೆಯೇ ಬಿಎಸಿ ಮೀಟಿಂಗ್‌ನಲ್ಲಿ ತೀರ್ಮಾನದ ಪ್ರಕಾರ ಇಂಥಿಂಥವರು ಇಂದು ಬೆಳಿಗ್ಗೆ ತಮ್ಮ ಇಲಾಖಾ ಬೇಡಿಕೆಗಳನ್ನು ಮಂಡಿಸಬೇಕು ಎಂದು ತೀರ್ಮಾನವಾಗಿತ್ತು.

ಅಧ್ಯಕ್ಷರು : ನಾನು ಚಂದ್ರೇಗೌಡರಿಗೆ ಹೇಳಿದ್ದೇನೆ. ಇನ್ನು ಮುಂದೆಯಾದರೂ ಸಂಬಂಧಪಟ್ಟ ಖಾತೆಗಳ ಸಚಿವರು ಅವರವರ ಬೇಡಿಕೆಗಳನ್ನು ಮಂಡಿಸಲು ಏರ್ಪಾಡು ಮಾಡಿ ಎಂದು. I have already instructed the Parliamentary Affairs Minister, he is the concerned person. ಇವೊತ್ತು ಮಾಡೋಣ. ಇನ್ನು ಮುಂದೆ ಆ ರೀತಿ ಆಗದಂತೆ ನಾನು ನೋಡಿಕೊಳ್ಳುತ್ತೇನೆ.

ಶ್ರೀ ಡಿ ವಿ ಸದಾನಂದಗೌಡ : ಅಧ್ಯಕ್ಷರೇ ಅವರೆಲ್ಲಿಂದಲೋ ಇಲ್ಲಿಗೆ ಬರಬೇಕು ಎಂದು ತಾವು ಹೇಳಿದಿರಿ ಬಹುಶಃ ಮಂತ್ರಿಗಳಿಗೆ ಇಲ್ಲೇ ಬೇಕಾದಂತಹ ಸೌಲಭ್ಯಗಳಿವೆ. ಅವರೇನಾದರೂ ಪರದೇಶಕ್ಕೆ ಹೋಗಿದ್ದಾರ? ಇವತ್ತು 10 ಗಂಟೆಗೆ ಸದನ ಎಂದು ನಿನ್ನೆ ಅಜೆಂಡಾ ಹೋದ ಮೇಲೆ ಕನಿಷ್ಟ ಬೆಳಗ್ಗೆ 6 ಗಂಟೆಗೆ ಏಳುವ ಸೌಜನ್ಯ ಮಂತ್ರಿಗಿರದಿದ್ದರೆ ಪ್ರಾಯಶಃ ನಾನು ಇದಕ್ಕೇನು ಹೇಳಬೇಕೋ ಅರ್ಥವಾಗುತ್ತಿಲ್ಲ. ತಾವು ಅವರನ್ನು ಡಿಫೆಂಡ್ ಮಾಡುತ್ತಿದ್ದೀರೆಂದು ಹೇಳುವುದಲ್ಲ.

ಅಧ್ಯಕ್ಷರು : ನಿಮ್ಮನ್ನು ಸಹ ಡಿಫೆಂಡ್ ಮಾಡುತ್ತಿದ್ದೇನಲ್ಲ, ಇದು ಕೊನೆಯ ಸಲ ಎಂದು ಹೇಳಿದ್ದೇನೆ. I am not defending them.

ಶ್ರೀ ಕುಡುವನಹಳ್ಳಿ ಶ್ರೀನಿವಾಸಗೌಡ : ಮಂತ್ರಿಗಳು ಸಮಯಕ್ಕೆ ಬರುವುದು ಸತ್ಸಂಪ್ರದಾಯ. ಸಮಯಕ್ಕೆ ಸರಿಯಾಗಿ ಬರದೇ ಇದ್ದರೆ ಅದನ್ನು ಸಂಪ್ರದಾಯ ಎಂದು ಮಾಡಿಕೊಳ್ಳೋಣ.

ಅಧ್ಯಕ್ಷರು : ಆಯಿತು ಬಿಡಿ. ಇಂದು ಬೆಳಿಗ್ಗೆ ಸಭೆಯನ್ನು 11ಕ್ಕೆ ಕರೆಯೋದು 10ಕ್ಕೆ ಕರೆದಿರುವುದರಿಂದ ಸ್ವಲ್ಪವ್ಯತ್ಯಾಸವಾಗಿದೆ. ಇರಲಿ. ಈಗ ಮಾನ್ಯ ಸಾಸನೂರು ತಮ್ಮ ಬೇಡಿಕೆ ಮಂಡಿಸುವರು.

ಬೇಡಿಕೆ ಸಂಖ್ಯೆ 35 ಕೃಷಿ ಮಾರುಕಟ್ಟೆ :

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003ರಂದೂ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಕೃಷಿ ಮಾರುಕಟ್ಟೆ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜ್ಯಸ್ವ ಖಾತೆಯಲ್ಲಿ 4,001.73 ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : 33, ವಾರ್ತಾ ಇಲಾಖೆ :

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ವಾರ್ತಾ ಸಚಿವರ ಪರವಾಗಿ ಮಂಡಿಸಿದರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ವಾರ್ತಾ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,137.73 ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ 12, ಯುವಜನ ಸೇವೆ ಮತ್ತು ಕೀಡಾ ಇಲಾಖೆ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಯುವಜನ ಸೇವೆ ಮತ್ತು ಕ್ರೀಡಾ ರಾಜ್ಯ ಸಚಿವರ ಪರವಾಗಿ ಮಂಡಿಸಿದರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಯುವಜನ ಸೇವೆಗಾಗಿ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,808.24 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ 45 - ಸಹಕಾರ (ಕೃಷಿ ಮಾರುಕಟ್ಟೆ ಹೊರತುಪಡಿಸಿ)

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಸಹಕಾರ ಸಚಿವರ ಪರವಾಗಿ ಮಂಡಿಸಿದರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರ (ಕೃಷಿ ಮಾರುಕಟ್ಟೆ ಹೊರತುಪಡಿಸಿ) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 4,880.22 ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,618.33 ಲಕ್ಷ ರೂಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : 8 ರೇಷ್ಮೆ ಮತ್ತು ಜವಳಿ ಇಲಾಖೆ :

ಶ್ರೀ ಡಿ.ಬಿ. ಚಂದ್ರೇಗೌಡ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರ ಪರವಾಗಿ ಮಂಡಿಸಿದರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ

ವರ್ಷದಲ್ಲಿ "ರೇಷ್ಮೆ ವ್ಯವಸಾಯ ಮತ್ತು ವಸ್ತ್ರೋದ್ಯಮಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 16,900.51 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 494.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : 27 – ಮುಜರಾಯಿ ಇಲಾಖೆ :

ಶ್ರೀ ಡಿ.ಬಿ. ಚಂದ್ರೇಗೌಡ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಜರಾಯಿ ರಾಜ್ಯ ಸಚಿವರ ಪರವಾಗಿ ಮಂಡಿಸಿದರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮುಜರಾಯಿ (ವಕ್ಫ್ ಮತ್ತು ಹಜ್ ಹೊರತುಪಡಿಸಿ)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,074.85 ಲಕ್ಷ ರೂ.ಗಳಿಗಿಂತ (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : 42 – ಕಂದಾಯ ಇಲಾಖೆ :

ಶ್ರೀ ಡಿ.ಬಿ. ಚಂದ್ರೇಗೌಡ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಕಂದಾಯ ಸಚಿವರ ಪರವಾಗಿ ಮಂಡಿಸಿದರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಂದಾಯ (ವಕ್ಫ್, ಹಜ್ ಮತ್ತು ಮುಜರಾಯಿ ಹೊರತುಪಡಿಸಿ)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 59,932.06 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 0.65 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು(ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : 46 – ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ :

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,04,108.20 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 6,262.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು(ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಬೇಡಿಕೆ ಸಂಖ್ಯೆ : 49 – ಮಹಿಳಾ ಮತ್ತು ಶಿಶು ಕಲ್ಯಾಣ ಇಲಾಖೆ :

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಹಿಳಾ ಮತ್ತು ಶಿಶು ಕಲ್ಯಾಣ ಸಚಿವರ ಪರವಾಗಿ ಮಂಡಿಸಿದರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-03ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ

"ಮಹಿಳಾ ಮತ್ತು ಶಿಶು ಕಲ್ಯಾಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 26,246.91 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 100.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು(ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು : ಮೇಲಿನ ಬೇಡಿಕೆಗಳನ್ನು ಮಂಡಿಸಲಾಯಿತು. ಇನ್ನು ನಿನ್ನೆ ದಿವಸ ನಡೆದ ಬಿಎಸಿ ಮೀಟಿಂಗ್ ತೀರ್ಮಾನದ ಪ್ರಕಾರ.....

ಶ್ರೀ ಸಿ. ಭೈರೇಗೌಡ : 4 ಗಂಟೆಯವರೆಗೂ ಚರ್ಚೆಯಾಗಬೇಕೆನ್ನುವುದು ನಮ್ಮ ಅಭಿಪ್ರಾಯ.

ಅಧ್ಯಕ್ಷರು : ಇನ್‌ಕ್ಲೂಡಿಂಗ್ ರಿಪ್ಲೈ.

ಶ್ರೀ ಸಿ. ಭೈರೇಗೌಡ : 4 ಗಂಟೆಯವರೆಗೂ ಚರ್ಚೆಗೆ ತಾವು ದಯವಿಟ್ಟು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಇನ್‌ಕ್ಲೂಡಿಂಗ್ ರಿಪ್ಲೈ ಎಂದು ತೀರ್ಮಾನವಾಗಿರುವುದು. ಆ ನಂತರ ಅದನ್ನು ಮೇಲ್ಮನೆಗೆ ಕಳುಹಿಸಿಕೊಡಬೇಕೆಂದು ತೀರ್ಮಾನವಾಗಿರುವುದು.

ಶ್ರೀ ಸಿ. ಭೈರೇಗೌಡ : ನಾವು ನಮ್ಮ ಕಡೆಯಿಂದ ಮತ್ತೆ ಮೇಲ್ಮನೆಯಲ್ಲಿರತಕ್ಕಂಥ ನಮ್ಮ ಸದಸ್ಯರುಗಳ ಪರವಾಗಿಯೂ ಕೂಡ ನಾನು ಸರ್ಕಾರಕ್ಕೆ ಮತ್ತು ತಮಗೆ ಭರವಸೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : 4 ಗಂಟೆ ಎನ್ನುತ್ತಾರೊ 3 ಗಂಟೆ ಎನ್ನುತ್ತಾರೋ ಎಷ್ಟು ಬೇಗ ಮುಗಿಸುತ್ತಾರೋ ಮಾಡಲಿ. ಅದರ ಮೇಲೇಕೆ ಮತ್ತೆ ಚರ್ಚೆ? ವ್ಯರ್ಥ ಕಾಲಾಪಹರಣ.

ಶ್ರೀ ಸಿ. ಭೈರೇಗೌಡ : 4 ಗಂಟೆಯವರೆಗೂ ದಯವಿಟ್ಟು ಅವಕಾಶ ಕೊಡಿ.

ಅಧ್ಯಕ್ಷರು : ಮಾತನಾಡುವಾಗ ತಾವು ಯಾರ ಮೇಲೇನಾದರೂ ಇಂಡಿವಿಜ್ಯುಯಲ್ ಅಲಿಗೇಷನ್ಸ್ ಮಾಡಬೇಕಾದರೆ ಅಥವಾ ಮಂತ್ರಿಗಳ ಮೇಲೆ ಮಾಡಬೇಕಾದರೆ ಮೊದಲೇ ಬರೆದು ಕಳುಹಿಸಬೇಕು. ಆಮೇಲೆ ದಯವಿಟ್ಟು ಮಧ್ಯೆ ಮಧ್ಯೆ ಗಲಾಟೆ ಬೇಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಎಮರ್ಜೆನ್ಸಿಯಲ್ಲಿ ನಾವೆಲ್ಲಾ ಜೈಲಿನಲ್ಲಿದ್ದೆವು ಮಾನ್ಯ ಅಧ್ಯಕ್ಷರೇ, ಜೈಲಿನಲ್ಲಿದ್ದಂಥ ಸಂದರ್ಭದಲ್ಲಿ ನಮಗೆ ಪೇಪರ್‌ಗಳನ್ನು ಕಳುಹಿಸುತ್ತಿರಲಿಲ್ಲ. ಆಕಸ್ಮಿಕವಾಗಿ ನಾವು ಪೇಪರ್ ಕೇಳಿದರೆ ಚಬಲಾನಿ ಎನ್ನುವ ಒಬ್ಬರು ಸೂಪರಿಂಟೆಂಡೆಂಟ್ ಇದ್ದರು. ಆ ಸೂಪರಿಂಟೆಂಡೆಂಟ್ ಏನು ಮಾಡುತ್ತಿದ್ದರು ಎಂದರೆ ಅವರು ಇಂಕ್ ಬಾಟೆಲ್‌ನ್ನು ಇಟ್ಟುಕೊಂಡಿದ್ದರು. ಇಂಕ್ ಬಾಟೆಲ್‌ನ್ನು ಇಟ್ಟುಕೊಂಡು ಯಾವುದು ಅವರಿಗೆ ರುಚಿ ಅನ್ನಿಸುವುದಿಲ್ಲ, ಬ್ಲಾಕ್ ಮಾರ್ಕ್‌ನಲ್ಲಿ ಅದರ ಮೇಲೆ ಕಷ್ಟು ಮಸಿಯನ್ನು ಹಾಕಿಬಿಡುತ್ತಿದ್ದರು. ಆಮೇಲೆ ಪೇಪರನ್ನು ಕಳುಹಿಸುತ್ತಿದ್ದರು. ಏನೂ ಓದುವುದಕ್ಕೆ ಉಳಿಯುತ್ತಲೇ ಇರಲಿಲ್ಲ. ಸಿನಿಮಾದೊಂದು ಬಿಟ್ಟರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮಂತ್ರಿಗಳು) : ಅವರೆಲ್ಲಾ ಏನು ಜೈಲಿನಲ್ಲಿದ್ದರಲ್ಲಾ, ಆಗ ಸುಖವಾಗೇ ಇದ್ದರು. ಪೇಪರು ಸಿಕ್ಕುತ್ತಿತ್ತು.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಮಗೆ ಬೇಡಿ ಹಾಕಿರುವುದು. ಬಟ್ಟೆ ಬಿಚ್ಚಿರುವುದು, ಇವೆಲ್ಲಾ ಡಿಫೆಂಡ್ ಮಾಡಿಕೊಳ್ಳುವುದಿದ್ದರೆ ಮಾಡಿಕೊಳ್ಳಿ. ನೀವು ಗೃಹ ಸಚಿವರಾಗಿ ಮಾಡಿಕೊಳ್ಳಿ. ಯಾರು ಬೇಡ ಎಂದು ಹೇಳುವುದಿಲ್ಲ. ನಡೆದದ್ದನ್ನು ಹೇಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇವತ್ತು ನಾನು ಹೇಳುತ್ತಿದ್ದೇನೆ. ನೀವೂ ಕೂಡ ಒಪ್ಪಿಕೊಳ್ಳುತ್ತಿದ್ದೀರಿ. ಇವತ್ತು ಪ್ರೈಮ್ ಮಿನಿಸ್ಟರ್ ಕೂಡ ಒಪ್ಪಿಕೊಳ್ಳುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಮಾಡಿರುವುದೆಲ್ಲಾ ಸರಿಯೇ. ನಮ್ಮನ್ನು ಜೈಲಿಗೆ ಹಾಕಿರುವುದೂ ಸರೀನೆ.

ಅಧ್ಯಕ್ಷರು : ಈ ಮನೆಯ ನಡವಳಿಕೆಗಳನ್ನು ಪರಿಪಾಲನೆ ಮಾಡುವುದು ನನ್ನ ಕರ್ತವ್ಯ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾವು ಯಾವ ರೀತಿ ನಡೆದುಕೊಳ್ಳಬೇಕೆಂದು ಹೇಳಿ ನಿಯಮಾವಳಿಗಳಲ್ಲಿದೆ, ಅದರ ಪ್ರಕಾರ ನಾವು ನಡೆದುಕೊಳ್ಳುತ್ತೇವೆ. ಆ ನಿಯಮಾವಳಿಗಳಿಗೆ ನಾವೇನಾದರೂ ತಪ್ಪಿ ಅಲಿಗೇಷನ್ಸ್ ಮಾಡಿದಾಗ ತಾವು ಆಗ ಇರುತ್ತೀರಲ್ಲಾ.

ವಿತ್ತೀಯ ಕಾರ್ಯಕಲಾಪಗಳು

(ಅ) ಬೇಡಿಕೆಗಳ ಮೇಲಿನ ಚರ್ಚೆ

† ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಅಧ್ಯಕ್ಷರೇ, ನಾನು ಬೇಡಿಕೆ ನಂ. 50,51 ಮತ್ತು 25 ರ ಬಗ್ಗೆ ವಿಚಾರವನ್ನು ಮಂಡನೆ ಮಾಡುವುದರ ಮೊದಲು ನನ್ನ ಮನಸ್ಸಿನಲ್ಲಿ ಒಂದು ವಿಚಾರ ಇದೆ. ಅದನ್ನು ತಮ್ಮಿಂದ ಕ್ಲಾರಿಫೈ ಮಾಡಿಕೊಳ್ಳಬೇಕೆಂದು ನನ್ನ ಮನಸ್ಸಿಗೆ ಅನಿಸುತ್ತಿದೆ. ನಾವು ಎರಡನೇ ಸಲ ಗೆದ್ದು ಬಂದಿದ್ದೇವೆ. 5 ಸಲ, 6 ಸಲ, 7 ಸಲ 8 ಸಲ ಗೆದ್ದು ಬಂದಿರತಕ್ಕಂಥ ಸದಸ್ಯರುಗಳು ಎಲ್ಲರೂ ಕೂಡ ಇಲ್ಲಿದ್ದಾರೆ. ನಮಗೆ ಎಲ್ಲೋ ಒಂದು ಕ್ಷಣ ನನಗೇ ಅನ್ನಿಸುತ್ತಿದೆ. ಬೆಳಿಗ್ಗೆ 10-30 ಗಂಟೆಗೆ 48 ಬೇಡಿಕೆಗಳನ್ನು ಮಂಡನೆ ಮಾಡಿದ್ದಾರೆ. ಈಗಾಗಲೇ ಮಂಡನೆ ಮಾಡಿರುವ 10 ಬೇಡಿಕೆಗಳು, ಪ್ಲಸ್ ಈಗ ಮಂಡನೆಯಾಗಿರುವ 48 ಬೇಡಿಕೆಗಳು ಇದಕ್ಕೆ ಕೇವಲ 4 ಗಂಟೆ 5 ಗಂಟೆಗಳ ಕಾಲದೊಳಗೇ ನಾವು ಚರ್ಚೆಯನ್ನು ಮಾಡಿ ಆ ವಿಚಾರವನ್ನು ನಾವು ಮಂಡನೆ ಮಾಡಿ ಉತ್ತರವನ್ನೂ ತೆಗೆದುಕೊಳ್ಳುವ ವ್ಯವಸ್ಥೆಯನ್ನು ನೋಡಿದಾಗ ನಾನು ಹೊಡೆದ ಹಾಗೆ ಮಾಡುತ್ತೇನೆ, "ನೀ ಅತ್ತ ಹಾಗೆ ಮಾಡು" ಎನ್ನುವ ಗಾದೆಯ ಹಾಗೆ ಇಲ್ಲಿ ಚರ್ಚೆ ಆಗುತ್ತಾ ಇದೆಯೇ ಎಂದು ಹೇಳಿ ನೋವು ನನ್ನ ಮನಸ್ಸನ್ನು ಕಾಡುತ್ತಿದೆ. ಅದಕ್ಕೆ ಯಾರನ್ನೂ ಜವಾಬ್ದಾರಿ ಮಾಡುತ್ತಿಲ್ಲ. ನನ್ನನ್ನು ಸೇರಿಸಿಕೊಂಡು ಹೇಳುತ್ತಿದ್ದೇನೆ. ಇದು ಸಾವಿರಾರು ಕೋಟಿ ರೂಪಾಯಿಗಳ ಬೇಡಿಕೆಯನ್ನು ರಾಜ್ಯದ ರಕ್ಷಣೆಯನ್ನು ಮಾಡುವುದಕ್ಕೆ ಹೊರಟಂಥ ನಾವು ಜನಪ್ರತಿನಿಧಿಗಳು ಇದಕ್ಕೆ ಕೊಡುವ ಪ್ರಾಮುಖ್ಯತೆಯನ್ನು ನೋಡಿದಾಗ ನನಗೆ ಬಹಳ ನೋವಾಗುತ್ತಿದೆ.

ಅಧ್ಯಕ್ಷರು : ಅಧಿವೇಶನ 8ನೇ ತಾರೀಖು ಪ್ರಾರಂಭವಾಯಿತು. 8 ರಿಂದ 30ನೇ ತಾರೀಖಿನವರೆಗೂ ನಿಮ್ಮನ್ನು ಯಾರೂ ಮಾತನಾಡಬೇಡಿ ಎಂದು ಹೇಳಿದರೇ? ಮಾತನಾಡಿ, ಮಾತನಾಡಿ ಎಂದು ಹೇಳಿದರೂ ನೀವೇ ಮಾತನಾಡದಿದ್ದರೆ ನಾವೇನು ಮಾಡೋಣ.?

ಶ್ರೀ ಎ. ರಾಮದಾಸ್ : ಇರಲಿ ಬಿಡಿ. ನನ್ನ ಮನಸ್ಸಿನಲ್ಲಿರುವ ಭಾವನೆಗಳನ್ನು ನಿಮ್ಮ ಮುಂದೆ ಹೇಳಿಕೊಂಡೆ ಅಷ್ಟೆ. ಇವತ್ತು ಪ್ರಮುಖವಾಗಿ ನಾನು ಆಗಲೇ ಹೇಳಿದ ಹಾಗೆ ಆರೋಗ್ಯ ಮಂತ್ರಿಗಳು ಇಲ್ಲಿ ಬಂದಿದ್ದಾರೆ, ಮೆಡಿಕಲ್ ಎಜ್ಯುಕೇಷನ್ ಮಿನಿಸ್ಟರ್ ನಂ. 1 ಇಲ್ಲಿ ಇದ್ದಾರೆ. 2 ಬಗ್ಗೆ ಕೂಡ ಮಾತನಾಡುವುದು ಇದೆ. ಆ ದೃಷ್ಟಿಯಲ್ಲಿ ಅವರು ಇಲ್ಲ ಎನ್ನುವ ವಿಚಾರವನ್ನು ತಮ್ಮುಂದೆ ಹೇಳುತ್ತಾ ಇದರ ಜೊತೆಯಲ್ಲಿ ಎನರ್ಜಿಗೆ ಸಂಬಂಧಪಟ್ಟ ಬೇಡಿಕೆ ಸಂಖ್ಯೆ 25 ಈ